ಶ್ರೀ. ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ೧೯೮೧ರ ಜನಗಣತಿಯಂತೆ ಜನಸಂಖ್ಯೆ ೧೪೪೪೦೭.
ನವಂಬರ್ ೧೯೮೫ರ ಅಂತ್ಯದವರೆಗೆ ಮಾಡಿರುವ ಖರ್ಚು :
ಅಭಿವೃದ್ಧಿಗಳಿಗೆ ರೂ. ೩,೦೦,೯೦೦
ನಿರ್ವಹಣೆಗೆ ರೂ. ೩ ೨೪,೯೦೭

ಆ) ೧೪, ೪೨೮

ರೂ.೧೨,೨೫, ೩೮೧ ಕಳೆದ ಹತ್ತು ವರ್ಷಗಳಲ್ಲಿ.

ಇ) ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವ ಬಗ್ಗೆ ರಚಿಸಿದ್ದ ಲೋಕಲ್ ಫೈನಾನ್ಸ್ ಕಮಿಷನ್ನು ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಆದರೆ ಈ ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ.

SRI T.S. MANI.—As you are aware the municipal administration in KGF is very bad. All are agitating for its taking over by the Government because no developmental activities are undertaken there What action does the Government intend to take in this behalf?

SRI A. LAKSHMISAGAR.—It is an elected body and I cannot simply take it over unless the elected body commits infractions in accordance with the Municipalities Act.

SRI. T.S. MANI.—As you are aware that sanitary conditions as K.G.F are very bad. There are no proper roads and civic amenities. I request the Hon. Minister to give some more funds for it.

SRI A. LAKSHMISAGAR.—10% increase has been done and let me see if anything can be done.

ಹಿರಿಯೂರು ತಾಲ್ಲೂಕಿನಲ್ಲಿ ತಾಂಡಗಳ ಭೂ ಹಿಡುವಳಿ ಜಮೀನು ಬಗ್ಗೆ.

೧೭೩೫. *ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ವಸತಿ ಹಾಗೂ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರಿಯೂರು ತಾಲ್ಲೂಕಿನಲ್ಲಿ ೧೫೭ ತಾಂಡಗಳ ಭೂ ಹಿಡುವಳಿ ಜಮೀನುಗಳಲ್ಲಿ ನಿರ್ಮಿಸಲ್ಪಟ್ಟಿರುವುದು ಹಾಗೂ ಸದರಿ ತಾಂಡದವರು ಸರ್ಕಾರದ (ಪಿ.ಎಚ್.ಎಸ್) ಜನತಾ ಮನೆಗಳನ್ನು ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸದರಿ ನಿವಾಸಿಗಳಿಗೆ ವಾಸಿಸಿರುವ ಮನೆಗಳ ದಾಖಲಾತಿಯನ್ನು ಒದಗಿಸದೆ ಇರುವುದರಿಂದ ಅವರ ಮನೆಗಳನ್ನು ಗ್ರಾಮಠಾಣಕ್ಕೆ ಸೇರಿಸುವಂತೆ ಕೋರಿ ಮನವಿಗಳೇನಾದರೂ ಸರ್ಕಾರದವರಿಗೆ ಬಂದಿವೆಯೇ,

ಇ) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ. ಆರ್. ಸಿಂಧ್ಯ(ವಸತಿ ಹಾಗೂ ಸಾರಿಗೆ ರಾಜ್ಯ ಸಚಿವರು).—

ಅ) ಬಂದಿದೆ. ಹಿರಿಯೂರು ತಾಲ್ಲೂಕಿನಲ್ಲಿ ೧೫೭ ರೆವಿನ್ಯೂ ಗ್ರಾಮಗಳಿದ್ದು ತಾಂಡಗಳ ಸಂಖ್ಯೆ ಕೇವಲ ೧೧ ಇರುತ್ತೆ.

ಆ) ಅಂತಹ ಮನವಿಗಳು ಬಂದಿರುವುದಿಲ್ಲ. ಆದರೆ ಕಂದಾಯ ಇಲಾಖೆಯಿಂದ ಕೊಡುತ್ತಿರುವ ಖಾನೇಷುಮಾರಿ ಮತ್ತು ಪಂಚಾಯ್ತಿ ತೆರಿಗೆ ದಾಖಲಾತಿಯ ಮೇರೆಗೆ ಜನತಾ ಗೃಹಗಳನ್ನು ಮಂಜೂರು ಮಾಡುತ್ತಿದೆ.

ಇ) ಪ್ರಶ್ನೆ (ಆ)ನಲ್ಲಿ ಉತ್ತರಿಸಿರುವ ಪ್ರಕಾರ ಸರ್ಕಾರದಿಂದ ಹಾಲಿ ಸಂಧಾರಣೆಯಲ್ಲಿರತಕ್ಕ ಕಾನೂನು ಪ್ರಕಾರ ಭೂ ಸುಧಾರಣೆ ಶಾಸನ ಅನ್ವಯ ಫಲಾನುಭವಿ ತನ್ನ ಸ್ವಂತ ಹಕ್ಕನ್ನು ಪಡೆಯಬೇಕಾದಲ್ಲಿ ಭೂ ನ್ಯಾಯ ಮಂಡಲಿಯ ಮುಂದೆ ಕ್ಲೈಮ್ ಅರ್ಜಿಯನ್ನು ಹಾಕಬಹುದಾಗಿರುತ್ತದೆ, ಅಥವಾ ಖಾಯಂ ಗೊಳಿಸಲು ಕಂದಾಯ ಇಲಾಖೆಯಿಂದ ಕ್ರಮ ಕೈಗೊಳ್ಳಬಹುದು.

ಶ್ರೀ ಆರ್. ರಾಮಯ್ಯ.--ಮಾನ್ಯ ಅಧ್ಯಕ್ಷರೇ ಹಿರಿಯೂರು ತಾಲ್ಲೂಕಿನಲ್ಲಿ ೧೫೭ ತಾಂಡಗಳು ಇವೆ. ಈ ತಾಂಡಗಳ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರವನ್ನು ಓದಿರುತ್ತಾರೆ. ಅವರು ಹೇಳಿರುವ ಪ್ರಕಾರ ಪರಿಶಿಷ್ಟಜಾತಿ, ಲಂಬಾಣಿ ವರ್ಗದವರು ಸೇರಿದಂತೆ ೧೧ ಜನರು ಇದ್ದಾರೆಂದು ಹೇಳಿರುತ್ತಾರೆ. ಯಾದವರು ಇತ್ಯಾದಿ ಸುಮಾರು ೧೫೭ ತಾಂಡಾಗಳು ಇವೆ. ರೆವಿನ್ಯೂ ವಿಲೇಜಸ್ ಎಷ್ಟು ಇದೆಯೋ ಅಷ್ಟೇ ತಾಂಡಗಳು ಅಲ್ಲಿ ಇವೆ. ಅವುಗಳ ಪರಿಸ್ಥಿತಿ ಏನಾಗಿದೆ ಎಂದರೆ ಅವರು ಬೇರೆ ಬೇರೆ ಹಿಡುವಳಿ ಜಮೀನುಗಳಲ್ಲಿ ಇವರು ಮನೆಗಳನ್ನು ಕಟ್ಟಿಕೊಂಡಿರುವುದರಿಂದ ಆ ಸೈಟುಗಳನ್ನು ಪಡೆಯತಕ್ಕಂಥ ಹಕ್ಕು ಇತ್ಯಾದಿ ಇದೆ. ಕಾಯಿದೆಯಲ್ಲಿ ಹೇಳಿರುವ ಪ್ರಗತಿಯನ್ನು ಸಾಧಿಸುವುದಕ್ಕೆ ಕಷ್ಟವಾಗುತ್ತದೆ. ಅಧಿಕಾರಿಗಳು ಭೂ ಸುಧಾರಣೆಯ ಪ್ರಕಾರ ಅರ್ಜಿಗಳನ್ನು ಸಲ್ಲಿಸಿ ತಮ್ಮ ಹಕ್ಕನ್ನು ತೆಗೆದುಕೊಳ್ಳಬಹುದೆಂದು ತಿಳಿಸಿರುತ್ತಾರೆ. ಭೂಸುಧಾರಣೆ ರೀತ್ಯ ಇವರು ತಮ್ಮ ಹಕ್ಕನ್ನು ಪಡೆಯುವುದು ಕಷ್ಟವಾಗುತ್ತದೆ ಎನ್ನುವುದನ್ನು ನಾನು ಸಚಿವರ ಗಮನಕ್ಕೆ ತರುತ್ತೇನೆ. ಅಲ್ಲಿ ಕೃಷಿ ಕಾರ್ಮಿಕರಾಗಿ, ದೊಡ್ಡ ದೊಡ್ಡ ಜಮೀನುದಾರರಾಗಿ ವಾಸದ ಮನೆಗಳನ್ನು ಕಟ್ಟಿ ಕೊಂಡಿರುವವರಿಗೆ ಮಾತ್ರ ಕೊಡಬೇಕೆಂದು ಶಾಸನ ಇದೆ ಆದರೆ ಇವರುಗಳು ಮನೆಗಳನ್ನು ಒಟ್ಟಿಗೆ ಸೇರಿಸಿ ಕಟ್ಟಿಕೊಂಡು ವಾಸ ಮಾಡುವುದರಿಂದ ಅರ್ಜಿಗಳನ್ನು ಪಡೆಯಲಿಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲದಿರುವುದರಿಂದ ಈ ತಾಂಡಗಳನ್ನು ಗ್ರಾಮಗಳ ತಾಂಡಗಳನ್ನಾಗಿ ಪರಿವರ್ತಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಚಿವರಿಂದ ಉತ್ತರವಿಲ್ಲ)

ಅಧ್ಯಕ್ಷರು ಶ್ರೀ ಜಿ. ಮಾದೇಗೌಡರು-ಸದಸ್ಯರು ಗೈರು ಹಾಜರಿ, ಈಗ ಮತ್ತೊಮ್ಮೆ ಗೈರುಹಾಜರಾದವರನ್ನು ಕರೆಯುತ್ತೇನೆ.

ಶ್ರೀ ಬಸವರಾಜ ಪಾಟೀಲ್	—	ಸದಸ್ಯರು ಗೈರು ಹಾಜರಿ
ಶ್ರೀ ಬಿ. ನಾರಾಯಣ ಸ್ವಾಮಿ	—	ಸದಸ್ಯರು ಗೈರು ಹಾಜರಿ
ಶ್ರೀ ಪಂಪಾಪತಿ	—	–''–
ಶ್ರೀ ಕೃಷ್ಣರವರು	—	–''–
ಶ್ರೀ ಸಿ. ಎಂ. ಉದಾಸಿ	—	–''–
ಶ್ರೀ ಎಂ.ಎಸ್.ಕೃಷ್ಣನ್	—	–''–
ಶ್ರೀ ಎಸ್. ಎಂ. ಆಡ್ಕಂತಾಯ	—	–''–
ಶ್ರೀ ಬಿ.ಎಸ್.ಯಡಿಯೂರಪ್ಪ		